(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಚೇರಿ
ನಂ:29, ಚಾ.ವಿ.ಸ.ನಿ.ನಿ.,
ವಿಜಯನಗರ, 2ನೇ ಹಂತ, ಹಿನಕಲ್,
ಮೈಸೂರು-570 0107
CIN:U40109KA2004SGC035177
Website: WWW.cescmysore.org

ಕಚೇರಿ ವಿಳಾಸ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಕೇಂದ್ರ ಉಪ – ವಿಭಾಗ,
ಎಂ.ಪಿ.ಎಲ್. ಕಟ್ಟಡ, ಶ್ರೀ ಹರ್ಷ ರಸ್ತೆ, ಮೈಸೂರು-570 001
Email ID: aeecz@cescmysore.org
ದೂರವಾಣಿ ಸಂಖ್ಯೆ: 0821-2421902

ಸ.ಕಾ.ನಿ.ಇಂ/ಕೇ.ಉ.ವಿ./ಸ.ಇಂ.(ತಾಂ)/16-17/ 2129

ದಿನಾಂಕ:- 21-6-17

ದಿನಾಂಕ 13.06.2017 ರಂದು ಬೆಳಿಗ್ಗೆ 11.00 ಗಂಟೆಗೆ **ಅಧೀಕ್ಷಕ ಇಂಜಿನಿಯರ್(ವಿ)**, ಕಾರ್ಯ ಮತ್ತು ಪಾಲನೆ ವೃತ್ತ, ಮೈಸೂರು, ರವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಉಪ ವಿಭಾಗ ವ್ಯಾಪ್ತಿಯ **ಜನ ಸಂಪರ್ಕ ಸಭೆಯ ನಡಾವಳಿಗಳು**

78

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರ ವರ್ಗದವರು

1. ಶ್ರೀ.ನರಸಿಂಹೇಗೌಡ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಮೈಸೂರು.
2. ಶ್ರೀ.ಸೋಮಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ವಿಭಾಗ. ಮೈಸೂರು.
3. ಶ್ರೀ.ಮಾದೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪ ವಿಭಾಗ. ಮೈಸೂರು.
4. ಶ್ರೀ.ಸುರೇಶ್ ಲೆಕ್ಕಾಧಿಕಾರಿಗಳು, ನ.ರಾ.ಮೊಹಲ್ಲಾ ವಿಭಾಗ, ಮೈಸೂರು.
5. ಶ್ರೀ.ಮಂಜುನಾಥ್, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಕೇಂದ್ರ ಉಪ ವಿಭಾಗ, ಮೈಸೂರು.
6. ಶ್ರೀ.ವಿಶ್ವಾಸ್.ಎಂ.ಆರ್, ಸಹಾಯಕ ಇಂಜಿನಿಯರ್(ವಿ),ತಾಂತ್ರಿಕ, ಕೇಂದ್ರ ಉಪ ವಿಭಾಗ, ಮೈಸೂರು.
7. ಶ್ರೀ.ಸುಕುಮಾರ ರಾಜು ಬಸವರಾಜು, ಸಹಾಯಕ ಇಂಜಿನಿಯರ್(ವಿ), ಮಂಡಿಮೊಹಲ್ಲಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
8. ಶ್ರೀಮತಿ ಧರಣಿದೇವಿ ಸಹಾಯಕ ಇಂಜಿನಿಯರ್(ವಿ) ಎಂ.ಪಿ.ಎಲ್ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
9. ಶ್ರೀ.ರಾಘವೇಂದ್ರ, ಸಹಾಯಕ ಇಂಜಿನಿಯರ್(ವಿ), ರಮಾವಿಲಾಸ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
10. ಶ್ರೀ.ಶಬ್ಬೀರ್, ಸಹಾಯಕ ಇಂಜಿನಿಯರ್(ವಿ), ಸಿದ್ದಾರ್ಥ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
11. ಶ್ರೀ.ಮಾಧು, ಕಿರಿಯ ಇಂಜಿನಿಯರ್(ವಿ),ಮಂಡಿಮೊಹಲ್ಲಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
12. ಶ್ರೀ.ಸಿದ್ದರಾಜು ಕಿರಿಯ ಇಂಜಿನಿಯರ್(ವಿ), ಎಂ.ಪಿ.ಎಲ್ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
13. ಶ್ರೀ.ಅಕ್ಕಮಹದೇವಿ, ಕಿರಿಯಇಂಜಿನಿಯರ್(ವಿ), ರಮಾವಿಲಾಸ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
14. ಶ್ರೀ.ಅರುಣ್‌ಕುಮಾರ್ ಕಿರಿಯ ಇಂಜಿನಿಯರ್(ವಿ), ಸಿದ್ದಾರ್ಥ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
15. ಶ್ರೀ.ರವಿಕುಮಾರ್, ಕಿರಿಯ ಇಂಜಿನಿಯರ್(ವಿ), ಮೇಗಳಾಪುರ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.

AEE(G)

AEE(O)

ನಂ. 1282
29 JUN 2017
ಮೈಸೂರು

ಶ್ರೀ.ಮಂಜುನಾಥ್ ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಕೇಂದ್ರ ಉಪ ವಿಭಾಗ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರನ್ನು, ಗ್ರಾಮಪಂಚಾಯಿತಿ ಮುಖಂಡರನ್ನು, ರೈತ ಮುಖಂಡರನ್ನು, ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರಾದ ಅಧೀಕ್ಷಕ ಇಂಜಿನಿಯರ್(ವಿ), ರವರು ಸಭೆಯ ಮೂಲ ಉದ್ದೇಶವನ್ನು ತಿಳಿಸುತ್ತಾ ಗ್ರಾಹಕರು ಮತ್ತು ನಿಗಮದ ನಡುವೆ ಸೌಹಾರ್ದ ವಾತಾವರಣದಲ್ಲಿ ಸಮಸ್ಯೆಗಳ ಪರಿಹಾರ, ಗ್ರಾಹಕರ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಕೆ.ಇ.ಆರ್.ಸಿ ನಿಯಾಮಾವಳಿಗಳ ಪ್ರಕಾರ ಈ ಸಭೆಯನ್ನು ಆಯೋಜಿಸಿದೆ ಎಂದು ಹಾಜರಿದ್ದ ಸಾರ್ವಜನಿಕರಿಗೆ ತಿಳಿಸಿ, ಬಂದಿರುವ ಸಾರ್ವಜನಿಕರಿಗೆ ಸಮಸ್ಯೆಗಳನ್ನು ತಿಳಿಸಲು ಅವಕಾಶವನ್ನು ನೀಡಿ ಸಭೆ ಮುಂದುವರೆಸಲಾಯಿತು.

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

| ಕ್ರ.ಸಂ | **ಅರ್ಜಿದಾರರ ಹೆಸರು ಮತ್ತು ದೂರವಾಣಿ ಸಂಖ್ಯೆ** | **ವಿಷಯ** | **ಕ್ರಮ** |
|---|---|---|---|
| 1 | ಶ್ರೀ.ಆಲಪ್ಪ, ಮೂಡಲಹುಂಡಿ 9845756310 | ಮೂಡಲ ಹುಂಡಿ ಗ್ರಾಮ ಪಂಚಾಯತಿಯ ವತಿಯಿಂದ ಆಶ್ರಯ ಮನೆಗಳನ್ನು ನೀಡಿದ್ದು, ಸುಮಾರು 8 ಮನೆಗಳಿದ್ದು ಅವುಗಳಿಗೆ ವಿದ್ಯುತ್ ಸಂಪರ್ಕ ಇಲ್ಲದೆ ತೊಂದರೆಯಲ್ಲಿರುವುದರಿಂದ ವಿದ್ಯುತ್ ಸಂಪರ್ಕ ಕೋರಿ ಮನವಿ ಮಾಡಿದರು. | ಅಧೀಕ್ಷಕ ಇಂಜಿನಿಯರ್(ವಿ), ಆಶ್ರಯ ಮನೆ ಆಗಿದ್ದರೆ ಮನೆ ನಿರ್ಮಾಣ ಮಾಡಿಕೊಂಡಿರುವವರು ಗುತ್ತಿಗೆದಾರರೊಂದಿಗೆ ಸೂಕ್ತ ದಾಖಲೆಗಳೊಂದಿಗೆ ಉಪ ವಿಭಾಗ ಕಛೇರಿಯಲ್ಲಿ ಅರ್ಜಿ ನೊಂದಾಯಿಸಿ ನಿಗಮದಿಂದ ಪ್ರತಿ ಮನೆಗೆ ಚಾಲ್ತಿಯಲ್ಲಿರುವ ಶುಲ್ಕಗಳನ್ನು ಪಾವತಿಸಿದಲ್ಲಿ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದೆಂದು ತಿಳಿಸಿದರು. |
| 2 | ಶ್ರೀ.ಅಪ್ಪುಗೌಡ, ಸಿದ್ದಾರ್ಥನಗರ ಕುರುಬಾರಹಳ್ಳಿ, ಮೈಸೂರು 9448753607 | ಕುರುಬಾರಹಳ್ಳಿಯಲ್ಲಿ ಒಂದು ಪರಿವರ್ತಕವನ್ನು ಅಳವಡಿಸಲಾಗಿದ್ದು, ಅದನ್ನು ಚಾಲನೆ ಮಾಡಿಲ್ಲದಿರುವ ಬಗ್ಗೆ ಗಮನ ಸೆಳೆದರು,<br><br>ಶ್ರೀ.ಅಪ್ಪುಗೌಡರವರು ಮುಂದುವರೆಸುತ್ತಾ 35 ಪೌರ ಕಾರ್ಮಿಕ ಕಾಲೋನಿ ಇದ್ದು ಅಲ್ಲಿ ತುಂಬಾ ಹಿಂದುಳಿದ ವರ್ಗದ ಜನರಿದ್ದು ವಿದ್ಯುತ್ ಬಾಕಿಯನ್ನು ಉಳಿಸಿಕೊಂಡಿರುತ್ತಾರೆ, ನಿಗಮದ ವತಿಯಿಂದ ವಸೂಲಾತಿಯ ಕ್ರಮವನ್ನು ಕಟ್ಟುನಿಟ್ಟಾಗಿ ತೆಗೆದು ಕೊಳ್ಳುತಿದ್ದು ಅತಿ ಹಿಂದುಳಿದ ವರ್ಗದವರಾದ ಅವರಿಗೆ ಕಂತಿನ ರೂಪದಲ್ಲಿ ಪಾವತಿಸಲು ಅವಕಾಶ ಮಾಡಿಕೊಡುವಂತೆ ಕೋರಿದರು. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪ ವಿಭಾಗ, ರವರು ಹೇಳಿರುವ ಪರಿವರ್ತಕವ ಈಗಾಗಲೇ ಚಾಲನೆ ಮಾಡಲಾಗಿರುತ್ತದೆ ಎಂದು ತಿಳಿಸಿದರು.<br><br>ಅಧ್ಯಕ್ಷರು 5000 ಮೇಲೆ ಬಾಕಿ ಉಳಿಸಿಕೊಂಡಿರುವ ಸ್ಥಾವರಗಳ ಗ್ರಾಹಕರಿಗೆ ಮಾತ್ರ ಒಂದು ಬಾರಿ ಕಂತಿನ ಮೂಲಕ ಪಾವತಿಸಲು ಅವಕಾಶ ನೀಡುವುದಾಗಿ ತಿಳಿಸಿ ತಕ್ಷಣದಿಂದ ಕಾರ್ಯ ಪ್ರವೃತ್ತರಾಗಲು ಸಹಾಯಕ ಇಂಜಿನಿಯರ್(ವಿ), ಸಿದ್ದಾರ್ಥನಗರ ರವರಿಗೆ ಸೂಚಿಸಲಾಗಿದೆ. |
| 3 | ಶ್ರೀ.ನಾಗರಾಜು ಹೊಸಳ್ಳಿ 9980697417 | ಅವರ ತೆಂಗಿನ ತೋಟದಲ್ಲಿ 11 ಕೆ.ವಿ ಲೈನ್ ಹಾದು ಹೋಗಿದ್ದು ಗಾಳಿ ಬಂದಾಗಲೆಲ್ಲಾ ವಿದ್ಯುತ್ ಅಡಚಣೆಯಾಗುತಿದ್ದು, ಲೈನನ್ನೇ | ಅಧೀಕ್ಷಕ ಇಂಜಿನಿಯರ್(ವಿ), ರವರು ಉತ್ತರಿಸುತ್ತಾ 11 ಕೆ.ವಿ ಲೈನನ್ನು ಹಲವಾರು ವರ್ಷಗಳ ಹಿಂದೆಯೇ |

| | | | |
|---|---|---|---|
| | | ಸ್ಥಳಾಂತರಗೊಳಿಸಲು ಕೋರಿದರು.<br><br>ಶ್ರೀ.ನಾಗರಾಜು ರವರು ಮುಂದುವರೆಸಿ ಹೊಸಳ್ಳಿಯಲ್ಲಿ ಎರಡು ಕಡೆ ಪರಿವರ್ತಕಗಳಿದ್ದು, ಒಂದೊಂದು ಟಿ.ಸಿಗೂ 13, 14 ಐ.ಪಿ ಸ್ಥಾವರಗಳಿರುವುದಾಗಿ ಪರಿವರ್ತಕಕ್ಕೆ ಅಧಿಕ ಭಾರವಾಗಿದ್ದು ಅಡಚಣೆಗೆ ಉಂಟಾಗುತ್ತಿರುವುದರಿಂದ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಕೋರಿದರು. | ಅಳವಡಿಸಿದ್ದು, ತಾವು ತೆಂಗಿನ ಮರಗಳನ್ನು ಲೈನಿನ ಆಸುಪಾಸಿನಲ್ಲಿ ಬೆಳೆಸಿರುವುದರಿಂದ ಈ ತೊಂದರೆ ಉದ್ಭವಿಸಿದ್ದು, ಮೇಗಳಾಪುರ ಕಿರಿಯ ಇಂಜಿನಿಯರ್(ವಿ), ರವರಿಗೆ 11 ಕೆ.ವಿ ಮಾರ್ಗ ಹಾದು ಹೋಗಿರುವ ಜಾಗದಲ್ಲಿ ಗರಿಗಳನ್ನು ತೆಗೆದು 11 ಕೆ.ವಿ ಮಾರ್ಗದ ನಿರ್ವಹಣೆಯನ್ನು ಮಾಡಲು ಸೂಚಿಸಿದರು.<br><br>ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ರವರು 2 ಹೆಚ್ಚುವರಿ ಪರಿವರ್ತಕಗಳನ್ನು UNIP ಯೋಜನೆಯಡಿಯಲ್ಲಿ ಅಳವಡಿಸುವ ಕಾರ್ಯವು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. |
| 4 | ಶ್ರೀ.ಆನಂದ.ಎಸ್ ಮಂಡಿ ಮೊಹಲ್ಲಾ<br>9902236082 | ಸ್ಥಾವರ ಸಂಖ್ಯೆ 28140 ಕ್ಕೆ ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಮನವಿಯನ್ನು ಸಲ್ಲಿಸಿದ್ದು, ಸದರಿ ಸ್ಥಾವರದ ಕಟ್ಟಡವನ್ನು ಕೆಡವಿ ಮನೆ ಕಟ್ಟಬೇಕಾಗಿರುವುದರಿಂದ ಶ್ರೀಘ್ರವಾಗಿ ಶಾಶ್ವತ ವಿದ್ಯುತ್ ನಿಲುಗಡೆ ಮಾಡಿ ಕೊಡಲು ಕೋರಿದರು. | ಸಹಾಯಕ ಲೆಕ್ಕಾಧಿಕಾರಿ ಪ್ರಭಾರ ರವರು ತಕ್ಷಣವೇ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| 5 | ಶ್ರೀ.ಸ್ವಾಮಿ, ಚಟ್ಟನಹಳ್ಳಿ ಪಾಳ್ಯ-9844014673 | ಹೊಸದಾಗಿ ಐ.ಪಿ ಸೆಟ್ ಸ್ಥಾವರಕ್ಕೆ ನಿಗಮದ ಶುಲ್ಕ ಪಾವತಿಸಿದ್ದು, ದಯಮಾಡಿ ಬೇಗ ವಿದ್ಯುತ್ ಸಂಪರ್ಕ ನೀಡಲು ಕೋರಿದರು. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪ ವಿಭಾಗ ರವರು UNIP ಯಲ್ಲಿ ಹೊಸ ಪರಿವರ್ತಕವನ್ನು ಅಳವಡಿಸಲು ಕಾರ್ಯಾದೇಶ ನೀಡಲಾಗಿದ್ದು, ವರ್ಕ ಅವಾರ್ಡ್ ಇನ್ನು ಆಗಿಲ್ಲವೆಂದು ಆದ ನಂತರ ತಕ್ಷಣ ಮಾಡುವುದಾಗಿ ತಿಳಿಸಿದರು. |
| 6 | ಶ್ರೀ.ಎಂ.ರಾಜಶೇಕರ್, ಅರುಣಾಚಲಂ ಸ್ಟ್ರೀಟ್ ಇಟ್ಟಿಗೆಗೂಡು | ಮನೆಯ ಮಾಪಕವು ಎಂ.ಎನ್.ಆರ್ ಆಗಿದ್ದು, ತಕ್ಷಣ ಬದಲಿಸಲು ಕೋರಿದರು. | ಕಿರಿಯ ಇಂಜಿನಿಯರ್ ಸಿದ್ದಾರ್ಥನಗರ ಶಾಖ ರವರು ಸ್ಥಳ ಪರಿಶೀಲನೆ ನಡೆಸಿ ಈ ದಿನವೆ ಬದಲಾಸುವುದಾಗಿ ಹೇಳಿದರು. |
| 7 | ಶ್ರೀ.ಮಾದೇಶ್ ಚಟ್ಟನಹಳ್ಳಿ ಪಾಳ್ಯ, ವರುಣಾ ಹೋಬಳಿ-9535764355 | ಅವರ ಬೋರ್ ವೆಲ್‌ಗೆ ಅಳವಡಿಸಿರುವ ಪರಿವರ್ತಕದಲ್ಲಿ ಹೆಚ್ಚು ವಿದ್ಯುತ್ ಹೊರೆ ಇದ್ದು, ಆ ಪರಿವರ್ತಕದ ಮೇಲೆ ಇರುವ ಎಲ್ಲಾ ಗ್ರಾಹಕರು ಶುಲ್ಕ ಪಾವತಿಸಿದ್ದು, ಹೆಚ್ಚುವರಿ ಟಿ.ಸಿ ಅಳವಡಿಸಿ ಕೊಡಲು ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ), ರವರ UNIP ಯೋಜನೆ ಅಡಿಯಲ್ಲಿ ಹೆಚ್ಚುವ ಪರಿವರ್ತಕ ಅಳವಡಿಸಲು ಸೂಚಿಸಿದಾಗ ಸಹಾಯಕ ಕಾರ್ಯನಿರ್ವಾಹ ಇಂಜಿನಿಯರ್(ವಿ), ಈಗಾಗಲ ಕಾರ್ಯಾದೇಶ ನೀಡಲಾಗಿದ್ದು ವರ್ಕ ಅವಾರ್ಡ್ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಎಂದು ತಿಳಿಸಿದರು. |
| 8 | ಆರ್.ರವಿ, ಸಜ್ಜೆಹುಂಡಿ ಗ್ರಾಮ ಪಂಚಾಯಿತಿ ಸದಸ್ಯರು<br>9482074330 | ಕಳೆದ ಒಂದು ತಿಂಗಳಿನಿಂದ ಐ.ಪಿ ಸೆಟ್‌ಗೆ ಪ್ರತಿ ದಿನ 7 ಗಂಟೆ 3 ಫೇಸ್ ವಿದ್ಯುತ್ ಅನ್ನೂ ಸಹ ಸರಿಯಾಗಿ ನೀಡುತ್ತಿಲ್ಲವೆಂದು ಕೆಲವೊಮ್ಮೆ ಒಂದು ದಿನ ಕಳೆದರು ತೊಂದರೆಗಳನ್ನು ವರುಣಾ | ಅಧೀಕ್ಷಕ ಇಂಜಿನಿಯರ್(ವಿ), ರವರ UNIP ಯೋಜನೆ ಅಡಿಯಲ್ಲಿ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತ ಅಳವಡಿಸಿ ಕೊಡಲು ಸೂಚಿಸಿದರು. |

| | | | |
|---|---|---|---|
| | | ಶಾಖೆಯ ರವರು ಪರಿಹರಿಸಿರುವುದಿಲ್ಲವೆಂದು ತಿಳಿಸಿದರು<br>ಈಗಾಗಲೇ ಇರುವ ಟಿ.ಸಿ ಯಲ್ಲಿ 18-19 ಗ್ರಾಹಕರು ಸ್ಥಾವರ ಸಂಖ್ಯೆ ಪಡೆದು ಬಳಸುತ್ತಿದ್ದು, ಇದರಿಂದ ತೊಂದರೆಯಾಗಿದ್ದು, ಹಾಗೂ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿದರು.<br><br>ಶ್ರೀ.ರವಿಯವರು ಪೌಲ್ಟ್ರಿ ಫಾರಂಗೆ ವಿದ್ಯುತ್ ಉಪಯೋಗಿಸುತ್ತಿದ್ದು, ಅದಕ್ಕೆ ಅತಿ ಹೆಚ್ಚು ವಿದ್ಯುತ್ ಅಡಚಣೆಯಾಗುವುದರಿಂದ ನಷ್ಟ ಉಂಟಾಗುತ್ತಿರುವುದಾಗಿ ಇದಕ್ಕಾಗಿ ದಯಮಾಡಿ ನಿರಂತರ ವಿದ್ಯುತ್ ಯೋಜನೆಯಡಿಯಲ್ಲಿ ಇಲಾಖೆ ವತಿಯಿಂದ ನಿರಂತರ ವಿದ್ಯುತ್ ಸೌಲಭ್ಯ ಕಲ್ಪಿಸಿ ಕೊಡಲು ಕೋರಿದರು. ಸಂಪರ್ಕ ನೀಡುವುದಾಗಿ ತಿಳಿಸಿದರು. | ಶ್ರೀ.ರವಿಯವರಿಗೆ ಮೊಸಂಬಾಯನಹಳ್ಳಿ ಮತ್ತು ಅಕ್ಕ ಪಕ್ಕದಲ್ಲಿ ವಿ.ವಿ ಕೇಂದ್ರ ನಿರ್ಮಾಣ ಮಾಡುವುದಕ್ಕೆ ಜಾಗವನ್ನು ಹುಡುಕುತಿದ್ದು, ತಾವುಗಳು ಗ್ರಾಮ ಪಂಚಾಯಿತಿ ಸದಸ್ಯರಾಗಿರುವುದರಿಂದ ಸರ್ಕಾರಿ ಜಾಗವನ್ನು ಹುಡುಕಿ ಕೊಡಲು ಕೊರಿದರು. ಶ್ರೀ. ರವಿಯವರು ಅಕ್ಕ ಪಕ್ಕದಲ್ಲೇ ಸರ್ಕಾರಿ ಜಾಗ ಹುಡುಕಿಕೊಡುವುದಾಗಿ ಭರವಸೆ ನೀಡಿದರು<br><br>ಅಧೀಕ್ಷಕ ಇಂಜಿನಿಯರ್(ವಿ), ರವರು ಉತ್ತಾರಿಸುತ್ತಾ ನಿಮ್ಮ ಸ್ಥಾವರವು ಸರ್ವೆ ನಂಬರ್ ನಲ್ಲಿ ಕಟ್ಟಿರುವುದರಿಂದ ಗ್ರಾ ಠಾಣಾ ವ್ಯಾಪ್ತಿಗೆ ಬರುವುದಿಲ್ಲವೆಂದು ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿಯಲ್ಲಿ ತಾವುಗಳೇ ಕೆ ನಿರ್ವಹಿಸಿಕೊಂಡಲ್ಲಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ನೀಡುವುದಾಗಿ ತಿಳಿಸಿದರು. |
| 9 | ಶ್ರೀ.ಮಹದೇವಸ್ವಾಮಿ ಅರೇಗೌಡನ ಹಳ್ಳಿ, ವರುಣ ಹೋಬಳಿ-8970355244 | ಹಾಲಿ ಇರುವ ಪರಿವರ್ತಕದ ಮೇಲೆ ಹೆಚ್ಚುವರಿ ಲೋಡ್ ಇದ್ದು ಅಡಿಷನಲ್ ಟಿ.ಸಿ ಅಳವಡಿಸಿಕೊಡಲು ಕೋರಿದರು. | ಅ.ಇಂ ರವರು ಇಲಾಖಾ ವತಿಯಿಂದ E & I ಯೋಜನೆಯಲ್ಲಿ ಹೆಚ್ಚುವರಿ 25 ಕೆ.ವಿ.ಎ ಟಿ.ಸಿ ಅಳವಡಿಸಲು ಅನುಮತಿಯನ್ನು ನೀಡಿ ತಕ್ಷಣವೇ ಅಂದಾಜು ಪಟ್ಟಿಯನ್ನು ತಯಾರಿಸಲು ಕಿರಿಯ ಇಂಜಿನಿಯರ್(ವಿ), ಮೇಗಳಾಪುರ ಶಾಖೆ ರವರಿಗೆ ಸೂಚಿಸಿ ಅಂದಾಜು ಪಟ್ಟಿ ನೀಡಿದ ನಂತರ ಕಾರ್ಯಾದೇಶ ನೀಡಲು ಸೂಚಿಸಿದರು. |
| 10 | ಶ್ರೀ.ನರೇಂದ್ರ, ಅರುಣಾಚಲಂ ರಸ್ತೆ, ಇಟ್ಟಿಗೆ ಗೂಡು | ಅರುಣಾಚಲಂ ರಸ್ತೆ, ಇಟ್ಟಿಗೆ ಗೂಡು ಇಲ್ಲಿ ಹೊಸ ಪರಿವರ್ತಕವನ್ನು ಅಳವಡಿಸಿದ್ದು, ಇದುವರೆವಿಗೂ ಚಾಲನೆಯಾಗಿಲ್ಲದಿರುವ ಬಗ್ಗೆ ಗಮನಕ್ಕೆ ತಂದರು<br>ಶ್ರೀ. ನರೇಂದ್ರ ರವರು ಮಾತು ಮುಂದುವರೆಸಿ ಮೈಸೂರು ರೇಸ್ ಕೋರ್ಸ್‌ನ ಹಿಂಬಾಗ ರಾಣಾ ಪ್ರತಾಪ ಸಿಂಗ್ ಜಿ ರಸ್ತೆ, ಜಿಲ್ಲಾ ಪೊಲೀಸ್ ಸಶಸ್ತ್ರ ಪಡೆ ದ್ವಾರದ ಮುಂದೆ ಒಂದು ಮರವು ಇನ್ನೇನು ಲೈನಿನ ಮೇಲೆ ಬೀಳುವ ಸ್ಥಿತಿಯಲ್ಲಿದ್ದು, ಅವಗಡವಾಗುವ ಸಂಭವ ವಿರುವುದರಿಂದ ತಕ್ಷಣ ಕ್ರಮ ಕೈಗೊಳ್ಳಲು ಕೋರಿದ್ದರು | ಕಿರಿಯ ಇಂಜಿನಿಯರ್(ವಿ), ಸಿದ್ಧಾರ್ಥ ನಗರ ಶಾಖೆ ರವರು RAPDRP ಯೋಜನೆಯಡಿಯಲ್ಲಿ ಸಂಪೂರ್ಣ ಕೆ ಮುಗಿದಿದ್ದು, ವಿದ್ಯುತ್ ಪರಿವೀಕ್ಷಕರಿಂದ ಅನುಮತಿ ಬಂದ ತಕ್ಷಣ ಚಾಲನೆ ಮಾಡುವುದಾಗಿ ತಿಳಿಸಿದರು.<br><br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಮಾತನಾಡಿ ಆ ವ್ಯಾಪ್ತಿಯು ಚಾಮುಂಡಿಪುರಂ ಉಪ ವಿಭಾಗ ವ್ಯಾಪ್ತಿಗೆ ಬರುವುದರಿಂದ ಸಂಬಂಧಿಸಿದ ಉಪವಿಭಾಗ ಅಧಿಕಾರಿ ರವರಿಗೆ ತಿಳಿಸುವುದಾಗಿ ಹೇಳಿದರು. |
| 11 | ಶ್ರೀ.ಬಸವಣ್ಣ, ಕುಪ್ಪೇಗಾಲ, 9741012445 | ಅವರ ಜಮೀನಿನಲ್ಲಿರುವ ಕೊಳವೆ ಬಾವಿಯ ಪಕ್ಕ ರೈಲ್ ಪೋಲ್ ಇರುವುದಾಗಿ ಅದನ್ನು ಬದಲಾಯಿಸಲು ಕೋರುತ್ತಾ ಹಾಗೂ ಕೊಳವೆ | ಅ.ಇಂ ರವರು ರೈಲ್ ಪೋಲನ್ನು ಆರ್.ಸಿ.ಸಿ ಪೋಲಿಗೆ ಬದಲಾಯಿಸಲು ಸೂಚಿಸಿದೆ. ಪರಿವರ್ತಕ ಸ್ಥಳವನ್ನು ಪರಿಶೀಲಿಸಿ ನಿಗಮದ |

| | | | |
|---|---|---|---|
| | | ಬಾವಿಯ ಪಕ್ಕದಲ್ಲೇ ಇರುವ ಪರಿವರ್ತಕ ಸ್ಥಳದ ಭೂಮಿಯು ಕುಸಿಯುತ್ತಿದ್ದು, ಅದನ್ನು ಬೇರೆಡೆಗೆ ವರ್ಗಾಯಿಸಲು ಕೋರಿದರು. | ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 12 | ಶ್ರೀ.ಗುರುಮೂರ್ತಿ, ಚೋರನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು, 7353953266 | ಇವರು ಪಿಲ್ಲಹಳ್ಳಿ ದೇವಸ್ಥಾನದ ಬಳಿ ಇರುವ ತಂತಿಗಳು ತುಂಬಾ ಬಾಗಿದ್ದು, ದೇವಸ್ಥಾನದ ಬಳಿ ಇರುವ ಕಂಬ ದುರಸ್ತಿಯಲ್ಲಿರುವುದರಿಂದ ತಕ್ಷಣ ಬದಲಾಯಿಸಲು ಕೋರಿದರು. ಶ್ರೀ.ಗುರುಮೂರ್ತಿ ರವರು ಮಾತನಾಡುತ್ತಾ ಚೋರನಹಳ್ಳಿ ರೈಲ್ ಪೋಲ್‌ಗಳನ್ನು ಬದಲಾಯಿಸುತ್ತಿದ್ದು, ಈಗಾಗಲೇ 2 ಕಂಬಗಳನ್ನು ಬದಲಾಯಿಸಿದ್ದು, 3 ಕಂಬಗಳು ಬಾಕಿ ಇರುವುದರಿಂದ ತಕ್ಷಣ ಬದಲಾಯಿಸಿ ಕೊಡಲು ಕೋರಿದರು.<br><br>ಗುರುಮೂರ್ತಿಯವರು ಮಾತು ಮುಂದುವರೆಸುತ್ತಾ ನಿರಂತರ ಜೋತಿಯಡಿಯಲ್ಲಿ ಪಿಲ್ಲಹಳ್ಳಿಯಲ್ಲಿ ನಿರಂತರ ವಿದ್ಯುತ್ ನೀಡದೆ ಇರುವುದರಿಂದ ಶೀಘ್ರವಾಗಿ ನೀಡಲು ಕೋರಿದರು | ಅಧಿಕ್ಷಕ ಇಂಜಿನಿಯರ್ (ವಿ), ರವರು ಶಾಖಾಧಿಕಾರಿಗಳಿಗೆ ತಕ್ಷಣ ಬದಲಾಯಿಸಲು ಸೂಚಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಬದಲಾಯಿಸಲು ಗುತ್ತಿಗೆ ನೀಡಿದ್ದು, ಕೆಲಸ ಪ್ರಗತಿಯಲ್ಲಿದ್ದು ಇನ್ನೂ 15 ದಿನಗಳಲ್ಲಿ ಬದಲಾಯಿಸುವ ಕಾರ್ಯ ಮುಗಿಯುವುದಾಗಿ ತಿಳಿಸಿದರು.. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಮಾತನಾಡಿ ಈ ಗ್ರಾಮವು ವರಕೋಡು ಫೀಡರ್‌ಗೆ ಬರುವುದಾಗಿ ಈ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ತಿಳಿಸಿದರು. |
| 13 | ಚಿಕ್ಕೆಗೌಡ, ವರಕೋಡು | ಕಳೆದ 8 ದಿನಗಳಿಂದ ಪರಿವರ್ತಕ ಕೆಟ್ಟು ನಿಂತಿದ್ದು, ಅದರಲ್ಲಿರುವ ಐ.ಪಿ ಸೆಟ್‌ಗಳಿಗೆ ವಿದ್ಯುತ್ ಇಲ್ಲದೆ ಬಹಳ ತೊಂದರೆಯಾಗಿರುವುದರಿಂದ ತಕ್ಷಣ ಬದಲಾಯಿಸಲು ಕೋರಿದರು. | ಅಧೀಕ್ಷಕ ಇಂಜಿನಿಯರ್ (ವಿ), ರವರು ಶಾಖಾಧಿಕಾರಿಯಲ್ಲಿ ಮಾಹಿತಿ ಕೋರಿದಾಗ ಒಂದು ದಿನದ ಹಿಂದೆ ನನ್ನ ಗಮನಕ್ಕೆ ಬಂದಿದ್ದು, ಈಗಾಗಲೇ ಅಂದಾಜು ಪಟ್ಟಿ ತಯಾರಿಸಿದ್ದೇನೆ ಒಂದು ದಿನದಲ್ಲಿ ಬದಲಾಯಿಸುತ್ತೇನೆ ಎಂದು ತಿಳಿಸಿದರು. |
| 14 | ಸಿದ್ದಯ್ಯ, ದಂಡಿಕೆರೆ ಗ್ರಾಮ ಪಂಚಾಯಿತಿ ಸದಸ್ಯರು | ದಂಡಿಕೆರೆ ಪರಿಶಿಷ್ಟ ಜಾತಿ ಬೀದಿಯಲ್ಲಿ ಕಂಬಗಳು ಬಾಗಿದ್ದು, ಬದಲಾಯಿಸಲು ಹಾಗೂ ಹೆಚ್ಚುವರಿ ಕಂಬಗಳನ್ನು ಬೀದಿ ದೀಪಕ್ಕೆ ಅಳವಡಿಸಿಕೊಡಲು ಕೋರಿದರು. | ಅಧೀಕ್ಷಕ ಇಂಜಿನಿಯರ್ (ವಿ), ರವರು ಉತ್ತರಿಸಿ ಗ್ರಾಮ ಪಂಚಾಯಿತಿ ವತಿಯಿಂದ ಅರ್ಜಿ ನೊಂದಾಯಿಸಿ ನಿಗಮಕ್ಕೆ ಶು[illegible] ಪಾವತಿಸಿದ್ದಲ್ಲಿ ನಿಗಮದ ನಿಯಾಮನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಾಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನು ಮುಕ್ತಾಯಗೊಳಿಸಿಧರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪವಿಭಾಗ ಮೈಸೂರು ರವರ ಮೆಮೊ ನಂ

ಸ.ಕಾ.ನಿ.ಇಂ/ಕೇ.ಉ.ವಿ./ಸ.ಇಂ.(ತಾಂ)/------- ದಿನಾಂಕ--------

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸಾ.ನಿ.ನಿ, ಕೇಂದ್ರ ಉಪವಿಭಾಗ,
ಮೈಸೂರು.

ಪ್ರತಿಯನ್ನು

1. ಪ್ರದಾನ ವ್ಯವಸ್ಥಾಪಕರು, (ವಾಣಿಜ್ಯ)/ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಎನ್.ಆರ್.ಮೊಹಲ್ಲಾ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಇಂಜಿನಿಯರ್(ವಿ),/ಮಂಡಿಮೊಹಲ್ಲಾ ಶಾಖೆ/ಎಂ.ಪಿ.ಎಲ್ ಶಾಖೆ/ರಮಾವಿಲಾಸ ಶಾಖೆ/ಸಿದ್ದಾರ್ಥನಗರ ಶಾಖೆ/ವರುಣಾ ಶಾಖೆ/ಮೇಗಳಾಪುರ ಶಾಖೆ ಮೈಸೂರು ರವರಿಗೆಮಾಹಿತಿಗಾಗಿ ಹಾಗೂ ಸೂಕ್ತ ಕ್ರಮ ವಹಿಸಿ ಸಮಸ್ಯೆಗಳನ್ನು ಬಗೆಹರಿಸಿದ ಸಂಬಂಧ ಅನುಪಾಲನಾ ವರದಿ ಸಲ್ಲಿಸಲು.
5. ಸಹಾಯಕ ಇಂಜಿನಿಯರ್(ತಾಂ), ಕೇಂದ್ರ ಉಪ ವಿಭಾಗ, ಮೈಸೂರು ರವರ ಮಾಹಿತಿಗಾಗಿ ಹಾಗೂ ಅನುಸರಣಾ ಕ್ರಮಕ್ಕಾಗಿ
6. ಕಛೇರಿ ಪ್ರತಿ